ಸಿ.ಸಿ. ನಂಃ 207/2018 ಪಿ ಡಬ್ಲ್ಯೂಃ 1

ಪ್ರಮಾಣ ಮಾಡಿದ ದಿನಾಂಕಃ 30.03.2023.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಿ ಕೆ ವಕೀಲರಿಂದ**

ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯ ಎಂದರೆ ನಮ್ಮದೆ ಜಮೀನು ಇದ್ದು ನಾನೇ ಸಾಗುಳಿ ಮಾಡುತ್ತೇನೆ. ನನಗೆ 20 ಎಕರೆ ಜಮೀನು ಇದೆ. ಜಮೀನಿಗೆ ಸಂಬಂದಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಆರೋಪಿಯು ನನ್ನ ತಾಯಿಯ ತಂಗಿಯ ಮಗ ಇರುತ್ತಾನೆ. ಅಂದರೆ ಆರೋಪಿ ನನಗೆ ತಮ್ಮನಾಗಬೇಕು ಎಂದರೆ ನಿಜ. ನಾನು ಆದಾಯ ತೆರಿಗೆಯನ್ನು 6 ವರ್ಷಗಳ ಹಿಂದೆ ಪಾವತಿಸಿದ್ದೆ ಆದರೆ ಈಗ ಪಾವತಿಸುತ್ತಿಲ್ಲ. ಆರೋಪಿಗೆ ಸಾಲ ಕೈಗಡ ಹಣ ನೀಡುವಾಗ ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದೆ. ನಾನು ಸದರಿ ವರ್ಷದಲ್ಲಿ ಮಾಡಿದ ಖರ್ಚು ಮತ್ತು ಆದಾಯದ ವಿವರಗಳನ್ನು ಸಂಬಂದಪಟ್ಟ ಲೆಕ್ಕ ಪರಿಶೋದಕನಿಗೆ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ತಾನು ಮನೆ ಕಟ್ಟಿಸುವ ಸಲುವಾಗಿ ಸಾಲ ಪಡೆಯುತ್ತಿರುವಾಗ ಬ್ಯಾಂಕಿನವರು ಹೇಳಿದ ಮೇರೆಗೆ ಆದಾಯ ತೆರಿಗೆ ಪಾವತಿಸಿ ಸಾಲ ಪಡೆದಿದ್ದು ಲೆಕ್ಕ ಪರಿಶೋದಕನಿಗೆ ಯಾವುದೆ ಲೆಕ್ಕ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ನನ್ನ ಪಿರ್ಯಾದಿಯಲ್ಲಿ ಆರೋಪಿಗೆ ನೀಡಿದ ಸಾಲದ ಹಣದ ಮೇಲೆ ಆದಾಯ ತೆರಿಗೆ ಪಾವತಿಸಿದ್ದೇನೆ ಎಂದು ಪಿರ್ಯಾದಿಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ಆದಾಯ ತೆರಿಗೆ ಕಚೇರಿಗೆ ಕೊಟ್ಟಿರುವುದಾಗಿ ಪಿರ್ಯಾದಿಯಲ್ಲಿ ನಮೂದಿಸಿದ್ದೇನೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಧ್ರಾಕ್ಷಾಯಣಿ ಎನ್ನುವವರು ನನ್ನ ಹೆಂಡತಿಯ ತಂಗಿ ಇರುತ್ತಾರೆ. ಆಕೆಯು ಆರೋಪಿಯ ವಿರುದ್ಧ ಸಿ.ಸಿ 196/2018 ಪ್ರಕರಣ ದಾಖಲಿಸಿರುವ ವಿಷಯ ನನಗೆ ಗೊತ್ತಿಲ್ಲ. ಇವತ್ತು ನಾನು ಮತ್ತು ದಾಕ್ಷಾಯಣಿ ಒಟ್ಟಿಗೆ ಸೇರಿ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ನಿಜ. 2017 ರಲ್ಲಿ ಆರೋಪಿಯು ಸಿರುಗುಪ್ಪದಲ್ಲಿ ಇದ್ದ. ಆತನು ಬಾಡಿಗೆ ಮನೆಯಲ್ಲಿ ಇದ್ದ ಅದರೆ ಆತನ ವಿಳಾಸ ನನಗೆ ಗೊತ್ತಿಲ್ಲ.

ಶಶಿಕುಮಾರ್ ಎನ್ನುವವನು ನನ್ನ ಮಗ. ಆತನು 2017 ರಲ್ಲಿ ದಾವಣೆಗೆಯಲ್ಲಿ ಪಿ.ಯು.ಸಿ ವಿದ್ಯಾಭ್ಯಾಸ ಮಾಡುತಿದ್ದನು. ಆರೋಪಿಯು ಸಿರುಗುಪ್ಪದಲ್ಲಿ ಕರೆಂಟ್ ಕೆಲಸ ಮಾಡುತಿದ್ದನು. ಈ

ವಿಷಯ ನಿನಗೆ ಯಾರು ಹೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಆತನು ಕರೆಂಟ್ ಕೆಲಸ ಮಾಡುವ ವಿಷಯ ತನಗೆ ಸ್ವಂತಕ್ಕೆ ಮಾಹಿತಿ ಇತ್ತು ಎನ್ನುತ್ತಾರೆ. ಆರೋಪಿಯ ಮನೆಯವರು ನಮ್ಮ ಮನೆಗೆ ಹೋಗುವುದು ಬರುವುದು ಮಾಡುತ್ತಿರಲಿಲ್ಲ. ನಾನು ಆರೋಪಿಯ ಮನೆಗೆ ಕೆಲಸ ಇದ್ದಾರೆ ಮಾತ್ರ ಹೋಗುತಿದ್ದೆ. ನನ್ನ ಮತ್ತು ಆರೋಪಿತನ ಮನೆಯ ಮದ್ಯೆ ಒಡನಾಟ ಇರಲಿಲ್ಲ. ನನಗೆ ಸೇರಿದ ಪಾಸ್ ಬುಕ್ ಗಳು ಇರುತ್ತವೆ. 2017 ರ ಬ್ಯಾಂಕ್ ಪಾಸ್ ಬುಕ್ ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅವಶ್ಯಕತೆ ಇದ್ದರೆ ಅವುಗಳನ್ನು ಹಾಜರುಪಡಿಸುತ್ತೇನೆ. ಆರೋಪಿಯು ನನಗೆ 01-03-2017 ರಂದು ಸಾಲ ಕೇಳಿದ್ದು ನಾನು ಅದೇ ದಿನ ಆತನಿಗೆ ಹಣ ಪಾವತಿಸಿದ್ದೇನೆ. ನಾನು ಹಣವನ್ನು ಆರೋಪಿಯ ಮನೆಗೆ ಹೋಗಿ ಕೊಟ್ಟು ಬಂದಿರುತ್ತೇನೆ. ಹಣವನ್ನು ಕೊಡುವಂತೆ ಆರೋಪಿಯು ಮೊದಲೆ ಕೇಳಿದ್ದ ಆದರೆ ನಾನು 1 ನೇ ತಾರೀಕು ಕೊಡುವುದಾಗಿ ಹೇಳಿದ್ದೆ. ಹಣವನ್ನು ಆರೋಪಿಗೆ ನಗದು ರೂಪದಲ್ಲಿ ಕೊಟ್ಟಿದ್ದೇನೆ. ಭತ್ತ ಮಾರಾಟದಿಂದ ಬಂದ ಹಣವನ್ನು ಆರೋಪಿಗೆ ಕೊಟ್ಟಿದ್ದೇನೆ. ಆರೋಪಿಯು ಜುಲೈ 1 ರಂದು ನನಗೆ ಚೆಕ್ ನ್ನು ಕೊಟ್ಟಿತ್ತಾನೆ. ಸದರಿ ಚೆಕ್ಕನ್ನು 16-08-2017 ರಂದು ನಾನು ಬ್ಯಾಂಕಿಗೆ ಸಲ್ಲಿಸಿದ್ದೇನೆ. ಖಾತೆಯಲ್ಲಿ ಹಣ ಇರುವುದಿಲ್ಲ ಎಂದು ಹೇಳಿದ್ದರಿಂದ ತಡ ಮಾಡಿ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೆ. ದಿನಾಂಕ 16-08-2017 ರಂದು ಆರೋಪಿಯು ಹಣ ಹಾಕಿರುವುದಾಗಿ ಹೇಳಿದ್ದರಿಂದ ಚೆಕ್ಕನ್ನು ನಾನು ಬ್ಯಾಂಕಿಗೆ ಸಲ್ಲಿಸಿದ್ದೆ. ಅದಕ್ಕಿಂತ ಪೂರ್ವದಲ್ಲಿ ನಾನು ಒಂದು ಬಾರಿ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿದ್ದೆ ಎಂದರೆ ನಿಜ. ಈ ವಿಷಯವನ್ನು ನಾನು ಪಿರ್ಯಾದಲ್ಲಿ ಬರೆಸಿಲ್ಲ ಎಂದರೆ ನಿಜ. ಪೂರ್ವದಲ್ಲಿ ಬ್ಯಾಂಕಿಗೆ ಚೆಕ್ಕನ್ನು ಸಲ್ಲಿಸಿದಾಗ ನಾನು ಆರೋಪಿಗೆ ನೋಟಿಸ್ ಕಳುಹಿಸಿರುವುದಿಲ್ಲ. ಆಗಲು ಕೂಡ ಆರೋಪಿಯ ಖಾತೆಯಲ್ಲಿ ಹಣ ಇರುವುದಿಲ್ಲ ಎಂದು ಚೆಕ್ ಅಮಾನ್ಯ ಗೊಂಡಿತ್ತು. ಆರೋಪಿಯು ಸಿರುಗುಪ್ಪದಲ್ಲಿ ಯಾವಾ ವರ್ಷದವರೆಗೆ ವಾಸ ಇದ್ದ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಸಿರುಗುಪ್ಪ ಇದ್ದ ವಾಸ ಮನೆಗೆ ನಾನು ನೋಟಿಸ್ ಕಳುಹಿಸಿಲ್ಲ. ಆ ವಿಳಾಸಕ್ಕೆ ಏಕೆ ನೋಟಿಸ್ ಕಳುಹಿಸಲಿಲ್ಲ ಎಂಬ ಪ್ರೆಶ್ನಗೆ ಆತನು ಸ್ವಲ್ಪ ದಿನ ಇರುತ್ತಾನೆ ಆಮೇಲೆ ಬಿಟ್ಟು ಹೋಗುತ್ತಾನೆ ಎಂದು ಸದರಿ ವಿಳಾಸಕ್ಕೆ ನಾನು ನೋಟಿಸ್ ಕಳುಹಿಸಿರುವುದಿಲ್ಲ. ನಾನು ಆರೋಪಿಗೆ ನೋಟಿಸ್ ಕಳುಹಿಸುವಾಗ ಆತ ಸಿರುಗುಪ್ಪಲ್ಲಿ ಇದ್ದ ಅಥವಾ ಇಲ್ಲ ಎಂದು ನನಗೆ ಗೊತ್ತಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆತನು ಸಿರುಗುಪ್ಪದಲ್ಲಿ ಇರಲಿಲ್ಲ ಆದ್ದರಿಂದ ಆತನ ಬಳ್ಳಾರಿಯ ಮನೆಗೆ ನೋಟಿಸ್

ಕಳುಹಿಸಿರುವುದಾಗಿ ಉತ್ತರಿಸುತ್ತಾರೆ. ಆರೋಪಿಯು ಚೆಕ್ಕನು ಸಿರುಗುಪ್ಪ ಪಟ್ಟಣದ ಐಡಿಬಿಐ ಬ್ಯಾಂಕಿನ ಮುಂದೆ ನನಗೆ ಕೊಟ್ಟಿರುತ್ತಾನೆ. ಆರೋಪಿಯು ಬಳ್ಳಾರಿಯ ವಿಳಾಸದಲ್ಲಿ 2017 ರಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿ ನಾನು ನೋಟಿಸ್ ಕಳುಹಿಸುವಾಗ ಆರೋಪಿಯು ಸಿರುಗುಪ್ಪದಲ್ಲಿ ಇದ್ದ ಎಂದರೆ ಸರಿಯಲ್ಲ. ಆರೋಪಿಯು ಸಿರುಗುಪ್ಪದಲ್ಲಿ ಇದ್ದರು ಕೂಡ ಆತನಿಗೆ ಮೋಸ ಮಾಡಬೇಕೆಂದು ಸಿರುಗುಪ್ಪ ವಿಳಾಸಕ್ಕೆ ನಾನು ನೋಟಿಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಈಗ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ನಾನು ಮತ್ತು ಧ್ರಾಕ್ಷಾಯಣಿ ಸಂಬಂದದಲ್ಲಿ ಚೆನ್ನಾಗಿದ್ದೇವೆ. ಧ್ರಾಕ್ಯಯಣಿ ದಾಖಲಿಸಿದ ಪ್ರಕರಣದ ಬಗ್ಗೆ ನಾನೇ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಾಯಿ ಕೌಲ್‌ಬಜಾರ್ ಪೋಲಿಸ್ ಠಾಣೆಯಲ್ಲಿ ನನ್ನ ಮೇಲೆ ಮತ್ತು ಇತರರ ಮೇಲೆ ದೂರು ಕೊಟ್ಟಿದ್ದರು ಎಂದರೆ ನಿಜ. ಜನವರಿ-2017 ರ ಒಳಗಡೆ ಆರೋಪಿಯ ತಾಯಿ ನಮ್ಮ ಮತ್ತು ಇತರ ಸಹೋದರರ ಮೇಲೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಆವಾಗಿನಿಂದ ನಮ್ಮ ಮತ್ತು ಆರೋಪಿಯ ಮನೆತನದ ಮದ್ಯೆ ಒಡನಾಟ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಫೈನಾನ್ಸ್ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ನಮ್ಮ ಸಹೋದರರು ಕೂಡ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣನನ್ನು ಬಡ್ಡಿ ಬಸಪ್ಪ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಸಿರುಗುಪ್ಪದಲ್ಲಿ ನಮ್ಮ ಮನೆತನದ ವ್ಯವಹಾರ ಬಡ್ಡಿ ಮೇಲೆ ಸಾಲ ಕೊಡುವುದು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಮತ್ತು ನನ್ನ ಮಗ 2017 ರಲ್ಲಿ ಕೆಂಚನ ಗುಡ್ಡ ರಸ್ತೆಯಲ್ಲಿ ಒಂದೆ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. 2015 ರಲ್ಲಿ ಒಂದೆ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. 2016 ರ ಪೂರ್ವದಲ್ಲಿ ಒಂದೆ ಮನೆಯಲ್ಲಿ ಇದ್ದರು ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. 2016 ರಲ್ಲಿ ನನ್ನ ಮಗ ಫೈನಾನ್ಸ್ ಮಾಡುತಿದ್ದ ಎಂದರೆ ಸರಿಯಲ್ಲ. ಸಾಕ್ಷಿಯು 2016 ರಲ್ಲಿ ತನ್ನ ಮಗ ಬಟ್ಟೆ ಅಂಗಡಿಯಲ್ಲಿ ಇದ್ದ ಎಂದು ಉತ್ತರಿಸುತ್ತಾರೆ. ಆರೋಪಿಯು 2016 ರಲ್ಲಿ ನನ್ನ ಮಗನ ಫೈನಾನ್ಸ್ ವ್ಯವಹಾರ ಮಾಡುತಿದ್ದ ಎಂದರೆ ಸರಿಯಲ್ಲ. ಐಡಿಬಿಐ ಬ್ಯಾಂಕಿನಲ್ಲಿ ನನ್ನ ಮಗನ ಖಾತೆ ಇದೆ ಎಂದರೆ ನಿಜ. ನನ್ನ ಮಗ ಆರೋಪಿಯ ಖಾತೆಯನ್ನು ಐಡಿಬಿಐ ಬ್ಯಾಂಕಿನಲ್ಲಿ ಮಾಡಿಸಿದ್ದನು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯು ನನ್ನ ಮಗನ ಫೈನಾನ್ಸ್ ವ್ಯವಹಾರ ನೋಡಿಕೊಳ್ಳತಿದ್ದರಿಂದ

ಭದ್ರತೆ ಸಲುವಾಗಿ ನನ್ನ ಮಗ ಆರೋಪಿತನ 2-3 ಖಾಲಿ ಚೆಕ್ಕಗಳನ್ನು ಪಡೆದುಕೊಂಡಿದ್ದ ಎಂದರೆ ಸರಿಯಲ್ಲ.

ಆರೋಪಿಗೆ ಹಣ ನೀಡುವಾಗ ಪ್ರಾಮೀಸರಿ ನೋಟನ್ನು ನಾನು ಬರೆಸಿಕೊಂಡಿಲ್ಲ. ನಾನು ಬೇರೆಯವರಿಗೆ ಸಾಲ ಕೊಟ್ಟಾಗ ಯಾವಾ ದಾಖಲೆ ಪಡೆಯುತ್ತಿನಿ ಎಂದರೆ ಸಾಕ್ಷಿ ತಾನು ಬೇರೆಯವರಿಗೆ ಸಾಲವನ್ನೆ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಮಗನ ಹತ್ತಿರ ಇರುವ ಖಾಲಿ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ನಾನು ಮತ್ತು ನನ್ನ ಸೊಸೆ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಿರುಗುಪ್ಪ ವಿಳಾಸಕ್ಕೆ ನೋಟಿಸ್ ಕಳುಹಿಸಿದರೆ ನಿಜ ಸಂಗತಿ ಹೊರ ಬೀಳುತದೆ ಎಂದು ನಾನು ಬಳ್ಳಾರಿ ವಿಳಾಸಕ್ಕೆ ನೋಟಿಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಚೆಕ್ ನ್ನು ದುರುಪಯೋಗ ಪಡಿಸಿಕೊಂಡ ವಿಚಾರ ಆರೋಪಿಗೆ ಗೊತ್ತಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಆರೋಪಿಯು ನನ್ನ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ

ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದು ವಿನಂತಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ, ಸಿರುಗುಪ್ಪ.